

## ವಿದ್ಯಾರ್ಥಿಗಳೇ ಗಮನಿಸಿ

# ಧಾರ್ಮಿಕ ಶಿಕ್ಷಣದ ಆವಶ್ಯಕತೆ

**ನೀ**ವೆಲ್ಲರೂ ನಿಮ್ಮ ಶಾಲೆಗಳಲ್ಲಿ ಕಲಿಯುವ ವಿಷಯಗಳಲ್ಲಿ ಬಹಳ ಜಾಣರಾಗಿರಬಹುದು. ಆದರೆ ಅದರ ಜೊತೆಗೆ ದೇವರಲ್ಲಿ ಭಕ್ತಿಯನ್ನೂ ಶ್ರದ್ಧೆಯನ್ನೂ ಬೆಳೆಸಿಕೊಳ್ಳಬೇಕು. ಆಗ ಮಾತ್ರ ನಿಮ್ಮ ವ್ಯಕ್ತಿತ್ವವು ಪೂರ್ಣವಾಗಿ ಅರಳುವುದು. ನಿಮ್ಮ ದಿನಚರಿಯಲ್ಲಿ ನೀವು ಬೆಳೆಸಿಕೊಳ್ಳಬೇಕಾದ ಕೆಲವು ಧಾರ್ಮಿಕ, ನೈತಿಕ ಹಾಗೂ ಆರೋಗ್ಯಕ್ಕೆ ಸಂಬಂಧಿಸಿದ ಅಂಶಗಳನ್ನು ಇಲ್ಲಿ ಪಟ್ಟಿಮಾಡಲಾಗಿದೆ.

೧. ಕಡೆಯಪಕ್ಷ ಸೂರ್ಯೋದಯಕ್ಕೆ ಮುಂಚೆ ಏಳಬೇಕು. ಏಳುತ್ತಲೇ ಭಗವಂತನ ಸ್ಮರಣೆ ಮಾಡಬೇಕು, ದೇವರ ಪಟಕ್ಕೆ ಅಥವಾ ಮೂರ್ತಿಗೆ ನಮಸ್ಕಾರ ಮಾಡಬೇಕು. ಆ ಸಮಯದಲ್ಲಿ ಈ ಶ್ಲೋಕವನ್ನು ಹೇಳಿಕೊಂಡರೆ ಒಳ್ಳೆಯದು:

**ತ್ವಮೇವ ಮಾತಾ ಚ ಪಿತಾ ತ್ವಮೇವ । ತ್ವಮೇವ ಬಂಧುಶ್ಚ ಸಖಾ ತ್ವಮೇವ।**
**ತ್ವಮೇವ ವಿದ್ಯಾ ದ್ರವಿಣಂ ತ್ವಮೇವ । ತ್ವಮೇವ ಸರ್ವಂ ಮಮ ದೇವದೇವ॥**

"ನೀನೇ ತಾಯಿ ಮತ್ತು ನೀನೇ ತಂದೆಯಾಗಿರುವೆ. ನೀನೇ ಬಂಧು ಮತ್ತು ನೀನೇ ಮಿತ್ರನಾಗಿರುವೆ. ನೀನೇ ವಿದ್ಯೆ, ನೀನೇ ಧನ. ಹೇ ದೇವದೇವ, ನನಗೆ ನೀನೇ ಸರ್ವಸ್ವವೂ ಆಗಿದ್ದೀಯೆ."

ಈ ರೀತಿ ಭಗವಂತನಲ್ಲಿ ಪರಮಶ್ರದ್ಧೆ ಮತ್ತು ಅನನ್ಯಭಕ್ತಿಗಳಿಂದ ಹೃದಯತುಂಬಿ ಪ್ರಾರ್ಥಿಸಬೇಕು. ಅನಂತರ ಭೂಮಿತಾಯಿಗೆ ನಮಸ್ಕಾರ ಮಾಡಬೇಕು. ಆಮೇಲೆ ಶೌಚ-ಸ್ನಾನಾದಿಗಳನ್ನು ಮಾಡಬೇಕು.

೨. ಅನಂತರ ನಿಮ್ಮ ಮನೆಯ ಸಂಪ್ರದಾಯ ಮತ್ತು ಪದ್ಧತಿಗೆ ಅನುಸಾರವಾಗಿ, ಭಗವಂತನ ಉಪಾಸನೆ, ಜಪ, ಪೂಜೆ ಮುಂತಾದವುಗಳನ್ನು ಮಾಡಬೇಕು. ಇದನ್ನು ಬೆಳಗ್ಗೆ ಮತ್ತು ಸಾಯಂಕಾಲ ತಪ್ಪದೆ ಮಾಡುವುದನ್ನು ಅಭ್ಯಾಸ ಮಾಡಿಕೊಳ್ಳಬೇಕು.

೩. ಈ ಪ್ರಕಾರ ನಿತ್ಯಕರ್ಮ ಮಾಡಿದನಂತರ ಮನೆಯಲ್ಲಿ ಇರುವ ತಂದೆ-ತಾಯಿಗಳು, ದೊಡ್ಡವರು – ಇವರಿಗೆ ನಮಸ್ಕಾರ ಮಾಡಬೇಕು. ನಿತ್ಯವೂ ನಮಸ್ಕಾರ ಮಾಡುವುದರ ಲಾಭ ಹೀಗಿದೆ:

**ಅಭಿವಾದನಶೀಲಸ್ಯ ನಿತ್ಯಂ ವೃದ್ಧೋಪಸೇವಿನಃ ।**
**ಚತ್ವಾರಿ ತಸ್ಯ ವರ್ಧಂತೇ ಆಯುರ್ವಿದ್ಯಾಯಶೋಬಲಮ್ ॥**

"ಯಾರು ನಿತ್ಯವೂ ನಮಸ್ಕಾರ ಮಾಡುವ ಅಭ್ಯಾಸ ಇಟ್ಟುಕೊಂಡಿದ್ದಾನೋ, ತಂದೆತಾಯಿಗಳ, ವೃದ್ಧರ ಸೇವೆ ಮಾಡುತ್ತಾನೋ ಅವನ ಆಯುಸ್ಸು, ವಿದ್ಯೆ, ಯಶಸ್ಸು, ಬಲ – ಈ ನಾಲ್ಕೂ ಹೆಚ್ಚಾಗುತ್ತದೆ."

೪. ನಾವು ಸೇವಿಸುವ ಆಹಾರ ಪುಷ್ಟಿದಾಯಕವೂ, ಶುಚಿಯೂ ರುಚಿಯೂ ಆಗಿರಬೇಕು. ಹೆಚ್ಚು ಜಿಡ್ಡು ಅಥವಾ ಕೊಬ್ಬಿನಿಂದ ಕೂಡಿರಬಾರದು. ಹಾಗೆಯೇ ಪವಿತ್ರವೂ ಸಾತ್ವಿಕವೂ ಹಗುರವೂ ಆಗಿರಬೇಕು. ಚೆನ್ನಾಗಿ ಜೀರ್ಣವಾಗುವಂತಿರಬೇಕು. ನಾವು ಮಾಡುವ ಊಟ ಹೆಚ್ಚು ಇರಬಾರದು; ಕಡಮೆಯೂ ಇರಬಾರದು. ಸಾಧ್ಯವಾದಷ್ಟು ನಾವು ಹೊರಗಡೆ ಸಿಕ್ಕುವ ತಿಂಡಿ ಪದಾರ್ಥಗಳನ್ನೂ, ಪೇಯಗಳನ್ನೂ ತ್ಯಜಿಸಬೇಕು. ಚೆನ್ನಾಗಿ ಹಸಿವಾದ ನಂತರವೇ ಊಟಮಾಡುವುದು ಒಳ್ಳೆಯದು. ಹಳೆಯದಾಗಿರುವ ಆಹಾರವನ್ನು ಸೇವಿಸಬಾರದು.

೫. ವ್ಯಾಯಾಮ, ನಡೆದಾಡುವುದು, ಆಟವಾಡುವುದು – ಇವುಗಳು ನಮ್ಮ ದೇಹವನ್ನು ಪುಷ್ಟಿಯಾಗಿ ಇಡುತ್ತವೆ. ರಾತ್ರಿ ಊಟ ಮಾಡಿದ ಮೇಲೆ ಕೂಡಲೇ ಮಲಗಬಾರದು. ಬೆಳಗ್ಗೆ ಬೇಗ ಏಳುವುದು, ರಾತ್ರಿ ಬೇಗ ಮಲಗುವುದು ಒಳ್ಳೆಯದು. ಪ್ರಾತಃಕಾಲ ಮಾಡುವ ಪೂಜಾದಿಗಳು, ಅಧ್ಯಯನ ವಿಶೇಷ ಪರಿಣಾಮವನ್ನು ಬೀರುತ್ತವೆ. ಆದ್ದರಿಂದ ಬೆಳಗ್ಗೆ ಬೇಗ ಎದ್ದು ಅವುಗಳನ್ನು ಮಾಡುವುದು ಒಳ್ಳೆಯದು.

೬. ಸಿನೆಮಾ, ಇಂಟರ್‌ನೆಟ್, ಮೊಬೈಲ್ ಫೋನ್ ಮುಂತಾದ ಮನರಂಜನೆಗಳಲ್ಲಿ ಬಹಳ ಕಾಲ ಕಳೆಯಬಾರದು. ಹಾಗೆಯೇ ಕೆಟ್ಟ ಹವ್ಯಾಸಗಳಿಂದ ದೂರ ಇರಬೇಕು. 'ವಿದ್ಯಾರ್ಥಿ' ಎಂದರೆ ವಿದ್ಯೆಯನ್ನು ಹುಡುಕಿಕೊಂಡು ಹೋಗುವವನು ಎಂದರ್ಥ. ಹೀಗಾಗಿ ವಿದ್ಯೆಯನ್ನು ಕಲಿಯುವುದೇ ನಮ್ಮ ಏಕಮಾತ್ರ ಗುರಿಯಾಗಬೇಕು. ಬೇರೆ ಅನವಶ್ಯಕ ವಿಷಯಗಳಲ್ಲಿ ಕಾಲವನ್ನು ಕಳೆಯಬಾರದು. ಕೆಟ್ಟ ಮಾರ್ಗದಲ್ಲಿ ಹೋಗದಿರುವಂತೆ ನಮ್ಮನ್ನು ನಾವು ರಕ್ಷಿಸಿಕೊಳ್ಳಬೇಕು.

**ದುರಾಚಾರೋ ಹಿ ಪುರುಷೋ ಲೋಕೇ ಭವತಿ ನಿಂದಿತಃ ।**
**ದುಃಖಭಾಗೀ ಚ ಸತತಂ ವ್ಯಾಧಿತೋಽಲ್ಪಾಯುರೇವ ಚ ॥**

"ದುರಾಚಾರಿಯಾದ ಪುರುಷನನ್ನು ಲೋಕದ ಜನರು ಸದಾಕಾಲ ನಿಂದಿಸುತ್ತಾರೆ. ಅವನು ದುಃಖವನ್ನು ಅನುಭವಿಸುತ್ತಾನೆ. ಅವನ ಆಯುಸ್ಸೂ ಕೂಡ ಕಡಮೆಯಾಗುತ್ತದೆ."

೭. ಅದೇ ರೀತಿ ವಿದ್ಯಾರ್ಥಿಗಳು, ತಂದೆತಾಯಿಯರು ಮತ್ತು ಹಿರಿಯರು ಹೇಳಿದ ಕಾರ್ಯವನ್ನು ತಪ್ಪದೆ ಮಾಡಬೇಕು. ಅದು ತನ್ನ ಕರ್ತವ್ಯ ಎಂದು ತಿಳಿದುಕೊಂಡು, ಆ ಕೆಲಸಗಳ ಜವಾಬ್ದಾರಿಯನ್ನು ಹೊತ್ತುಕೊಂಡು, ಯಾವುದೇ ಕೆಲಸವನ್ನು ಅಚ್ಚುಕಟ್ಟಾಗಿ ಮಾಡಿ ಮುಗಿಸಬೇಕು. ಹಾಗೆಯೇ ನಿಷ್ಕಾಮಭಾವದಿಂದ ಕುಟುಂಬ, ಸಮಾಜ ಮತ್ತು ದೇಶದ ಸೇವೆ ಮಾಡಬೇಕು. ಶ್ರೀತುಲಸೀದಾಸರು ಹೀಗೆ ಹೇಳುತ್ತಾರೆ:

**ಪರಹಿತ ಸಂಸ ಧರ್ಮ ನಹಿ ಭಾಈ । ಪರ ಪೀಡಾ ಸಹಾ ನಹಿ ಅಧಮಾಈ॥**
**ಪರಹಿತ ಬಸ ಜಿನ್ಹ ಕೇ ಮನ ಮಾಹಿ। ತಿನ್ಹ ಕಹು ಕಛು ದುರ್ಲಭ ಜಗ ನಾಹಿ॥**

" ಪರಹಿತಕ್ಕೆ ಸಮನಾದ ಧರ್ಮವಿಲ್ಲ. ಪರಪೀಡೆಗೆ ಸಮಾನವಾದ ಅಧರ್ಮ ಕಾರ್ಯವಿಲ್ಲ. ಯಾರ ಮನಸ್ಸಿನಲ್ಲಿ ಪರಹಿತ ಕಾಮನೆ ನೆಲೆಸಿದೆಯೋ, ಅವರಿಗೆ ಜಗತ್ತಿನಲ್ಲಿ ದುರ್ಲಭವಾದುದು ಯಾವುದೂ ಇಲ್ಲ."

೮. ಯಾವತ್ತೂ ಪ್ರಿಯವಾದ, ಹಿತವಾದ, ಸತ್ಯವಾದ ಮಾತುಗಳನ್ನೇ ಆಡಬೇಕು. ನಮ್ಮ ಮಾತು ಹೇಗಿರಬೇಕು ಎನ್ನುವುದನ್ನು ಈ ಶ್ಲೋಕ ಹೇಳುತ್ತದೆ:

**ಸತ್ಯಂ ಬ್ರೂಯಾತ್ ಪ್ರಿಯಂ ಬ್ರೂಯಾತ್ ನ ಬ್ರೂಯಾತ್ ಸತ್ಯಮಪ್ರಿಯಮ್।**
**ಪ್ರಿಯಂ ಚ ನಾನೃತಂ ಬ್ರೂಯಾದೇಷ ಧರ್ಮ ಸನಾತನಃ ॥**

"ಸತ್ಯವನ್ನೇ ನುಡಿಯಬೇಕು, ಪ್ರಿಯವಾದುದನ್ನೇ ಮಾತನಾಡಬೇಕು. ಸತ್ಯವಾಗಿದ್ದೂ ಅಪ್ರಿಯವಾದದ್ದನ್ನು ಮಾತನಾಡಬಾರದು. ಯಾವುದು ಪ್ರಿಯವಾಗಿದ್ದು ಅಸತ್ಯವಾಗಿದೆಯೋ ಅದನ್ನು ಆಡಬಾರದು. ಇದೇ ಸನಾತನ ಧರ್ಮ."

ಶ್ರೀಕೃಷ್ಣನು ಇದನ್ನೇ ಹೇಳುತ್ತಾನೆ: **ಅನುದ್ವೇಗಕರಂ ವಾಕ್ಯಂ ಸತ್ಯಂ ಪ್ರಿಯಹಿತಂ ಚ ಯತ್ ।** : "ಯಾರಿಗೂ ಉದ್ವೇಗವನ್ನು ಮಾಡದಿರುವ, ಪ್ರಿಯವಾದ, ಹಿತಕರವಾದ ಮತ್ತು ಯಥಾರ್ಥವಾದ ಮಾತನ್ನು ಆಡುವುದು ಮಾತಿನ ತಪಸ್ಸು ಎನ್ನಿಸಿಕೊಳ್ಳುತ್ತದೆ."


**ಇವೇ ಉತ್ತಮ ವಿದ್ಯಾರ್ಥಿಯ ಕೆಲವು ಲಕ್ಷಣಗಳು.** ✴

# ರಾಮಾನುಜರನ್ನು ಕುರಿತು ಸ್ವಾಮಿ ವಿವೇಕಾನಂದರು

**ಡಾ. ಎಚ್. ರಾಮಚಂದ್ರಸ್ವಾಮಿ**

(*ಹಿಂದಿನ ಸಂಚಿಕೆಯಿಂದ*)

ಶ್ರೀಶಂಕರಾಚಾರ್ಯರ ಮೂರು ಮುಖ್ಯ ನಿರ್ಣಯಗಳಾದ (೧) ಬ್ರಹ್ಮವು ನಿರ್ಗುಣ (೨) ಪ್ರಪಂಚವು ಮಿಥ್ಯೆ (೩) ಬ್ರಹ್ಮವೇ ಏಕೈಕ ಸತ್ಯವಾದ್ದರಿಂದ, ಮುಕ್ತಿ ಎಂದರೆ ಜೀವಾತ್ಮವು ಬ್ರಹ್ಮದಲ್ಲಿ ಲೀನವಾಗುವುದು – ಈ ಮೂರು ನಿಲುವುಗಳನ್ನು ಭಕ್ತಿ ವೇದಾಂತಿಯಾದ ರಾಮಾನುಜರು ತಿರಸ್ಕರಿಸುತ್ತಾರೆ. ಹೀಗೆ ತಮ್ಮ ವಾದವನ್ನು ಬೆಳೆಸುವ ಅವರು, 'ಬ್ರಹ್ಮನೆಂದರೆ ವಿಷ್ಣುವಿಗಿಂತ ಬೇರೆಯಲ್ಲ' ಎಂದಮೇಲೆ ಅವನು ನಿರ್ಗುಣನಾಗಿರಲು ಹೇಗೆ ಸಾಧ್ಯ ಎನ್ನುತ್ತಾರೆ. ಅವರ ಪಾಲಿಗೆ ದೇವರು ತನ್ನದೇ ಸೃಷ್ಟಿಯಾದ ವಿಶ್ವ ಹಾಗೂ ಮಾನವನ ಮೇಲೆ ಆತ್ಮೀಯ ಸಂಬಂಧವುಳ್ಳವನು. ಶಂಕರರ ಬ್ರಹ್ಮವು ಶೂನ್ಯವಲ್ಲದೆ ಬೇರೆಯಲ್ಲ, ಶೂನ್ಯವನ್ನು ಸ್ಥಾಪಿಸಲೆತ್ನಿಸುವ ತರ್ಕವು ತರ್ಕವೇ ಅಲ್ಲ ಎನ್ನುತ್ತಾರೆ ರಾಮಾನುಜರು. ತಮ್ಮ ಶ್ರೀಭಾಷ್ಯದಲ್ಲಿ ಮೊದಲನೆಯ ಬ್ರಹ್ಮಸೂತ್ರದ ಭಾಷ್ಯವನ್ನು ಬರೆಯುವಾಗಲೇ ಅವರು, "ಅದ್ವೈತಿಗಳು ಹೇಳುವಂತೆ ಬ್ರಹ್ಮವು ನಿರ್ಗುಣನಾದ ಶುದ್ಧಪ್ರಜ್ಞೆಯಲ್ಲ; ಏಕೆಂದರೆ ನಿರ್ಗುಣ ವಸ್ತುಗಳ ಇರುವಿಕೆಯನ್ನು ಸ್ಥಾಪಿಸುವುದಾದರೂ ಹೇಗೆ?" ಎನ್ನುತ್ತಾರೆ. ಏನಾದರೂ 'ಜ್ಞೇಯ'ವಾಗಬೇಕಾದರೆ ಅದಕ್ಕೊಂದು ವೈಶಿಷ್ಟ್ಯ ಇರಲೇಬೇಕಲ್ಲವೆ? "ವ್ಯತ್ಯಾಸದ ಅರಿವೇ ಪ್ರಜ್ಞೆ. ವ್ಯತ್ಯಾಸವು ಮೂಲದಲ್ಲೇ ಇರುವುದರಿಂದ, ವ್ಯತ್ಯಾಸವೆಂಬುದೇ ಮೂಲವನ್ನು ಗ್ರಹಿಸಲು ಅಗತ್ಯವಾಗಿ ಬೇಕಾದ ಗುಣ" ಎನ್ನುತ್ತಾರೆ. ಇದಲ್ಲದೆ, ಬ್ರಹ್ಮನನ್ನು ಶಂಕರಾಚಾರ್ಯರು **ಸತ್ ಚಿತ್ ಆನಂದ** ಎಂದು ವರ್ಣಿಸಿದಾಗ, ಗುಣಗಳನ್ನು ಕೊಟ್ಟಂತಾಗಲಿಲ್ಲವೆ? ಎಂದು ಕೂಡ ಪ್ರಶ್ನಿಸುತ್ತಾರೆ. ಈ ಮೂರೂ ಪದಗಳಿಗೆ ಬ್ರಹ್ಮ ಎಂಬ ಒಂದೇ ಅರ್ಥವಿರಲು ಸಾಧ್ಯವಿಲ್ಲ; ಆದ್ದರಿಂದ ಅವು ಬ್ರಹ್ಮನ ಗುಣಗಳು ಎಂದೂ ವಾದಿಸುತ್ತಾರೆ.



'ಪ್ರಪಂಚವು ಅವಿದ್ಯೆಯಿಂದ ಉಂಟಾದ ಮಾಯೆ' ಎಂಬ ಶಂಕರರ ಎರಡನೆಯ ನಿರ್ಣಯವು ತರ್ಕವಿರೋಧಿ ಹಾಗೂ ಧರ್ಮವಿರೋಧಿ ಎನ್ನುತ್ತಾರೆ ರಾಮಾನುಜರು. ಅವರ ವಾದ ಹೀಗಿದೆ: "ಈ ಅವಿದ್ಯೆ ಅಥವಾ ಅಜ್ಞಾನ ಎಂಬುದು ಎಲ್ಲಿದೆ? ಜೀವಾತ್ಮನಲ್ಲಿಯೋ, ಬ್ರಹ್ಮನಲ್ಲಿಯೋ? ಜೀವಾತ್ಮನಲ್ಲಿರಲು ಸಾಧ್ಯವಿಲ್ಲ, ಏಕೆಂದರೆ ಬ್ರಹ್ಮವು ಅವಿದ್ಯೆಯಿಂದ ಆವೃತವಾದ ಮೇಲೆಯೇ ಅದು ಅಸ್ತಿತ್ವಕ್ಕೆ ಬರುವುದು. ಅದು ಬ್ರಹ್ಮದಲ್ಲೂ ಇರಲು ಸಾಧ್ಯವಿಲ್ಲ, ಏಕೆಂದರೆ ಬ್ರಹ್ಮ ಸ್ವತಸ್ಸಿದ್ಧ ಹಾಗೂ ಜ್ಞಾನಸ್ವರೂಪ. ಆದ್ದರಿಂದ ಅಜ್ಞಾನಕ್ಕೆ ಹೇಗೆ ಅದು ಸ್ಥಾನವಾಗಬಲ್ಲುದು? 'ಸ್ವಯಂಪ್ರಕಾಶವಾದ ಶುದ್ಧಪ್ರಜ್ಞೆಯೇ ಅಜ್ಞಾನದಿಂದ ಆವೃತವಾಗುವುದು' ಎನ್ನುವ ಅದ್ವೈತಿಗಳು ಸ್ಥಾಪಿಸುತ್ತಿರುವುದು ಬ್ರಹ್ಮದ ನಾಶವನ್ನು ಮಾತ್ರ" – ಇದು ರಾಮಾನುಜರ ವಾದ.

ಬ್ರಹ್ಮವು ಏಕೈಕ ಸತ್ಯವಾದ್ದರಿಂದ ಜೀವಾತ್ಮನು ಬ್ರಹ್ಮದಲ್ಲಿ ಲೀನವಾಗಿ ತನ್ನ ಅಸ್ತಿತ್ವವನ್ನು ಕಳೆದುಕೊಳ್ಳುವನು ಎಂಬ ಶಂಕರರ ಮೂರನೆಯ ನಿರ್ಣಯವನ್ನು ನೋಡೋಣ. ಅದ್ವೈತದ ನಿಲುವಿಗೆ ಬಹುಮುಖ್ಯ ಬೆಂಬಲ ಛಾಂದೋಗ್ಯ ಉಪನಿಷತ್ತಿನಲ್ಲಿ ಉದ್ದಾಲಕ ಆರುಣಿ ತನ್ನ ಮಗ ಶ್ವೇತಕೇತುವಿಗೆ ಹೇಳಿರುವ **'ತತ್ ತ್ವಮ್ ಅಸಿ'** ಎಂಬ ವಾಕ್ಯ. ಇದನ್ನು ಕುರಿತು ರಾಮಾನುಜರು ತಮ್ಮ ಶ್ರೀಭಾಷ್ಯದಲ್ಲಿ, "ಈ ಮೂರು ಶಬ್ದಗಳ ಅಳವಡಿಕೆಯೂ ಸಹ ಅದ್ವೈತ ಬ್ರಹ್ಮವನ್ನು ಸೂಚಿಸುವುದಿಲ್ಲ. ಇಲ್ಲಿ **ತತ್** ಎಂದರೆ ನಿಜವಾದ ಅಭಿಲಾಷೆಗಳುಳ್ಳ ಸ್ವಪ್ರಜ್ಞಾಪೂರ್ಣ ಬ್ರಹ್ಮ. ಅದಕ್ಕಿಂತ ಮುಂಚಿನ ಉಪನಿಷದ್ಭಾಗದಲ್ಲಿ ಇದೇ ತತ್ ಎಂದು ಸೂಚಿಸಲ್ಪಟ್ಟ ಬ್ರಹ್ಮವು, 'ನಾನು ಬಹುವಾಗುವೆನು' ಎಂದು ಯೋಚಿಸಿತು (**ತದೈಕ್ಷತ ಬಹುಸ್ಯಾಂ ಪ್ರಜಾಯೇಯೇತಿ**) ಎಂದು ಹೇಳಿದೆ. **ತ್ವಮ್** ಎನ್ನುವುದು ದೇವರೊಂದಿಗೆ ಸಂಬಂಧಿಸಿರುವ ಜೀವಾತ್ಮ; ಏಕೆಂದರೆ ಉಪನಿಷತ್ತೇ ಹೇಳುವಂತೆ, ಈ ವಿಶ್ವದಲ್ಲಿರುವ ಸಮಸ್ತ ವಸ್ತುಗಳ ಆತ್ಮವೂ ಆತನೇ, ಅವು ಪ್ರಜ್ಞಾಪೂರ್ಣವಾಗಿರಲಿ, ಇಲ್ಲದಿರಲಿ'. ಹೀಗೆ ರಾಮಾನುಜರು 'ತತ್ ತ್ವಮ್ ಅಸಿ' ವಾಕ್ಯವನ್ನು ವಿವರಿಸುತ್ತಾರೆ.

ರಾಮಾನುಜರ ಕೃತಿಗಳು ಶಂಕರರ ವಾದವನ್ನು ಸೋಲಿಸುವುದಕ್ಕಾಗಿ ಇರುವುವು ಎನ್ನುವುದಕ್ಕಿಂತ ಅವು ಭಕ್ತಿಕಾವ್ಯಗಳು, ಭಾರತೀಯ ದೈವವಾದದ ಆಕರಗಳು ಎನ್ನುವುದೇ ಇಲ್ಲಿ ಸೂಕ್ತ. ದೈವವಾದವನ್ನು ವೇದಾಂತದ ಮಟ್ಟಕ್ಕೆ ಏರಿಸಿರುವರೆಂಬುದೇ ರಾಮಾನುಜರ ವಿಶೇಷ. ಅವರು ಶ್ರೀಭಾಷ್ಯ ಮತ್ತು ಗೀತಾಭಾಷ್ಯ – ಈ ಎರಡನ್ನೇ ಬರೆದಿದ್ದರೂ, ಉಪನಿಷತ್ತುಗಳಿಂದಲೂ ಸ್ಫೂರ್ತಿ ಪಡೆಯುತ್ತಾರೆ. ಅವರ ವೇದಾಂತಕ್ಕೆ ಶಕ್ತಿಯನ್ನು ಕೊಡುವುದು, ಅದನ್ನು ಜನಪ್ರಿಯವಾಗಿ ಮಾಡಿರುವುದು, ಅವರು ವಿಷ್ಣುಪುರಾಣ ಹಾಗೂ ಭಾಗವತದಿಂದಲೂ, ದಕ್ಷಿಣದಲ್ಲಿ ಆಧ್ಯಾತ್ಮಿಕತೆಯನ್ನು

ಪುನರುಜ್ಜೀವನಗೊಳಿಸಿದ ಆಳ್ವಾರುಗಳ ಭಗವದ್ಭಕ್ತಿಯ ದಿವ್ಯ ಪ್ರಬಂಧಗಳಿಂದಲೂ ಪಡೆದಿರುವ ಸ್ಫೂರ್ತಿ. ಆದ್ದರಿಂದ ರಾಮಾನುಜರ ಕೃತಿಗಳನ್ನು ಸಂಸ್ಕೃತ, ತಮಿಳು ಎರಡಕ್ಕೂ ಸಲ್ಲುವ **'ಉಭಯವೇದ'**ಗಳೆನ್ನುವರು. ಇದನ್ನು ಸಾಧಿಸಲು ಅವರಿಗೆ ಪ್ರಚಂಡ ಮೇಧಾಶಕ್ತಿ ಎಷ್ಟು ಅಗತ್ಯವಾಗಿದ್ದಿತೋ ಅಷ್ಟೇ, ಮೃದುಹೃದಯದ ಸಂವೇದನೆಯೂ ಅಗತ್ಯವಾಗಿತ್ತು. ಈ ಕಾರಣದಿಂದಲೇ ಅವರು ಜನಸಾಮಾನ್ಯರಿಗೆ ತುಂಬ ಪ್ರಿಯರಾದರು; ಸಾಮಾನ್ಯಜನರು ತಮಗರಿವಿಲ್ಲದಂತೆಯೇ ಅವರ ಅನುಯಾಯಿಗಳಾದರು.

ಶ್ರೀರಾಮಕೃಷ್ಣ ವಚನವೇದದಲ್ಲಿ ಶ್ರೀಭಾಷ್ಯಕಾರರಾದ ರಾಮಾನುಜರ ಬಗೆಗಿನ ಮಾತು ಐದು ಕಡೆಗಳಲ್ಲಿ ಬಂದಿದೆ. ಒಂದು ಸಂದರ್ಭದಲ್ಲಿ ಶ್ರೀರಾಮಕೃಷ್ಣರು ವಿಶಿಷ್ಟಾದ್ವೈತ ತತ್ತ್ವವನ್ನು ಸ್ವಲ್ಪ ದೀರ್ಘವಾಗಿಯೇ ವಿವರಿಸಿದ್ದಾರೆ. ಶಂಕರರ ಮಾತು ಸುಮಾರು ಇಪ್ಪತ್ತು ಕಡೆ ಬಂದಿದ್ದರೂ ಒಂದು ಸಲವೂ ಶ್ರೀರಾಮಕೃಷ್ಣರು ಅದ್ವೈತವನ್ನು ವಿವರಿಸುವುದಿಲ್ಲ. ಕೇವಲ ಅನುಭವದಿಂದ ಮಾತ್ರವೇ ತಿಳಿಯಬಹುದಾದ ಅದನ್ನು ಮಾತಿನಿಂದ ವಿವರಿಸಲಾಗದು ಎಂಬುದು ಅವರ ಭಾವನೆ. ಆದರೆ ವಿಶಿಷ್ಟಾದ್ವೈತವನ್ನು ತಮ್ಮ ಎಂದಿನ ಸರಳ ಆಡುಭಾಷೆಯಲ್ಲಿ, ಅದ್ಭುತ ಉಪಮಾನಗಳೊಂದಿಗೆ ವಿವರಿಸಿದ್ದಾರೆಂಬುದೇ ವಿಶೇಷ. ಅವುಗಳಲ್ಲಿ ಒಂದು ಸಂದರ್ಭ, ಗಿರೀಶಚಂದ್ರ ಘೋಷ್ ಮನೆಯಲ್ಲಿ ೧೮೮೫ರ ಮಾರ್ಚ್ ೧೧ರಂದು ನಡೆದ ಭಕ್ತರ ಸಮಾವೇಶ. ಅಲ್ಲಿದ್ದ, ಮುಂದೆ ಸ್ವಾಮಿ ವಿವೇಕಾನಂದರಾದ ನರೇಂದ್ರನು ಅವತಾರಗಳ ಬಗ್ಗೆ ತನಗೆ ನಂಬಿಕೆಯಿಲ್ಲ ಎಂದು ಹೇಳುತ್ತಾನೆ. ಅನಂತವಾದದ್ದು ಭಾಗಗಳಾಗುವುದಿಲ್ಲ ಎಂದು ಅವನ ವಾದ. ಗಿರೀಶ್, "ದೇವರು ಮಾನವರೂಪವನ್ನು ತಳೆಯುವುದಿಲ್ಲವೆಂದು ನಿನಗೆ ಹೇಗೆ ಗೊತ್ತು?" ಎಂದಾಗ, ನರೇಂದ್ರನು, "ದೇವರು ಮಾತಿಗೂ ಮನಸ್ಸಿಗೂ ನಿಲುಕಲಾರ, ಅವನು ಅವಾಙ್ಮಾನಸಗೋಚರ" ಎಂದು ಉತ್ತರಿಸಿದ. ಶ್ರೀರಾಮಕೃಷ್ಣರು, "ಇಂತಹ ಚರ್ಚೆಗಳು ನನಗೆ ಇಷ್ಟವಾಗುವುದಿಲ್ಲ. ನಾನು ಎಲ್ಲದರಲ್ಲಿಯೂ ಎಲ್ಲ ಕಡೆಯೂ ದೇವರನ್ನು ನೋಡುತ್ತೇನೆ. ಶಂಕರರು ಹೇಳುವುದು, ರಾಮಾನುಜರ ವಿಶಿಷ್ಟಾದ್ವೈತ ಎರಡೂ ವೇದಾಂತವೇ" ಎನ್ನುತ್ತಾರೆ. ಆಗ ನರೇಂದ್ರನು, "ಸ್ವಾಮಿ, ವಿಶಿಷ್ಟಾದ್ವೈತ ಎಂದರೇನೆಂದು ನನಗೆ ತಿಳಿಸುವಿರಾ?" ಎಂದು ಕೇಳಿದ. ಅದಕ್ಕೆ ರಾಮಕೃಷ್ಣರು ಅವನ ಕಡೆಗೆ ತಿರುಗಿ, "ರಾಮಾನುಜರ ಸಿದ್ಧಾಂತದ ಪ್ರಕಾರ ಪರಬ್ರಹ್ಮವನ್ನು ದೇಹ ಆತ್ಮಗಳಿಂದ ಬೇರೆ ಎಂದು ತಿಳಿಯಲಾಗದು. ಅವು ಮೂರೂ ಒಂದೇ – ಒಂದರಲ್ಲಿಯೇ ಮೂರೂ ಇವೆ. ಈಗ ಒಂದು ಬೇಲದ ಹಣ್ಣನ್ನು ತೆಗೆದುಕೊಳ್ಳೋಣ. ಅದರ ಕರಟ, ಬೀಜಗಳು, ತಿರುಳು – ಮೂರನ್ನೂ ಬೇರೆಮಾಡಿ ಇಡೋಣ. ಈಗ ಒಬ್ಬರು ಬೇಲದ ಹಣ್ಣಿನ ತೂಕವೆಷ್ಟು ಎಂದು ತಿಳಿಯಲು ಇಷ್ಟಪಟ್ಟರು ಎಂದು ಊಹಿಸೋಣ. ಅದರ ತಿರುಳು ಮಾತ್ರವನ್ನೇ ತೂಕಮಾಡಿದರೆ ಆಗುವುದಿಲ್ಲ. ಕರಟ, ಬೀಜಗಳು, ತಿರುಳು ಎಲ್ಲವನ್ನೂ ಒಟ್ಟಿಗೆ ತೂಗಿದರೆ ಮಾತ್ರ ಇಡೀ ಹಣ್ಣಿನ ತೂಕ ಸಿಕ್ಕುವುದು. ಬೇಲದ ಹಣ್ಣಿನಲ್ಲಿ ತಿರುಳು ಮಾತ್ರವೇ ಮುಖ್ಯ, ಕರಟವಾಗಲಿ ಬೀಜವಾಗಲಿ ಇಲ್ಲ ಎಂದು ನಮ್ಮ ವಿವೇಚನೆ ಹೇಳುವುದೂ ಸರಿ. ಆದರೆ ಸ್ವಲ್ಪ ಯೋಚಿಸಿದರೆ ತಿರುಳು ಯಾವುದರಿಂದ ಆಗಿದೆಯೋ ಅದೇ ವಸ್ತುವಿನಿಂದಲೇ ಕರಟ ಬೀಜಗಳೂ ಆಗಿವೆ ಎಂಬುದು ಅರಿವಾಗುವುದು. ವಿಚಾರದ ಮೊದಲ ಹಂತದಲ್ಲಿ ನಾವು, 'ಇದಲ್ಲ, ಇದಲ್ಲ' ಎನ್ನುವೆವು. ಹೀಗೆ, ಪರಬ್ರಹ್ಮವು ಜೀವಾತ್ಮನೂ ಅಲ್ಲ, ಪ್ರಪಂಚವೂ ಅಲ್ಲ. ಪರಬ್ರಹ್ಮ ಮಾತ್ರವೇ ಸತ್ಯ, ಉಳಿದುದೆಲ್ಲ ಅಸತ್ಯ. ಮುಂದಿನ ಹಂತದಲ್ಲಿ, ಚಿಂತನೆ ಸ್ವಲ್ಪ ಮುಂದುವರೆದ ಮೇಲೆ, ತಿರುಳು ಯಾವ ವಸ್ತುವಿನಿಂದ ಆಗಿದೆಯೋ, ಬೀಜ ಕರಟಗಳೂ ಅದೇ ವಸ್ತುವಿನಿಂದ ಆಗಿವೆ ಎಂದು ನಮಗೆ ಗೊತ್ತಾಗುವುದು. ಯಾವ ವಸ್ತುವಿನ ಆಧಾರದ ಮೇಲೆ ಪರಬ್ರಹ್ಮವು, 'ಇದಲ್ಲ, ಇದಲ್ಲ' ಎಂದು ತೀರ್ಮಾನಿಸುವೆವೋ, ಅದೇ ವಸ್ತುವಿನ ಆಧಾರದ ಮೇಲೆಯೇ ಪ್ರಪಂಚ ಹಾಗೂ ಜೀವಾತ್ಮಗಳ ನಮ್ಮ ಕಲ್ಪನೆ ನಿಂತಿರುವುದು. ಆದ್ದರಿಂದ, ರಾಮಾನುಜರು ಹೇಳುವಂತೆ, ಪರಬ್ರಹ್ಮವು ಜೀವಾತ್ಮನಿಂದಲೂ, ಪ್ರಪಂಚದಿಂದಲೂ ವಿಶಿಷ್ಟವಾಗಿದೆ ಎಂದಂತಾಗುವುದಿಲ್ಲವೆ? ವಿಶಿಷ್ಟಾದ್ವೈತ ಎಂದರೆ ಇದೇ" ಎಂದು ಹೇಳಿದರು. ರಾಮಾನುಜರ ತತ್ತ್ವವನ್ನು ಇದಕ್ಕಿಂತಲೂ ಚೆನ್ನಾಗಿ ವಿವರಿಸುವುದಕ್ಕೆ ಸಾಧ್ಯವಿಲ್ಲ. ಈ ಮಾತುಗಳನ್ನು ಕೇಳಿದಾಗ ನಮಗೆ ಈಶಾವಾಸ್ಯ ಉಪನಿಷತ್ತಿನ ಮೊದಲ ಮಂತ್ರ ಜ್ಞಾಪಕಕ್ಕೆ ಬರುವುದು: **'ಈಶಾವಾಸ್ಯಮಿದಂ ಸರ್ವಂ ಯತ್ಕಿಂ ಚ ಜಗತ್ಯಾಂ ಜಗತ್'** (ಈ ಚಲಿಸುತ್ತಿರುವ ಜಗತ್ತಿನಲ್ಲಿ, ಚಲಿಸುತ್ತಿರುವ ಎಲ್ಲವನ್ನೂ ಭಗವಂತನಿಂದ ಆವರಿಸಿಬಿಡಬೇಕು).

ತಮ್ಮ ಸಾಧನೆಗೆ ಸಹಾಯವೆಂದು ಶ್ರೀರಾಮಕೃಷ್ಣರಾಗಲಿ ವಿವೇಕಾನಂದರಾಗಲಿ ಈ ಆಚಾರ್ಯರುಗಳ ಕೃತಿಗಳನ್ನು ಬಳಸಿದವರಲ್ಲವಾದರೂ, ತಾವು ಅವರ ಪರಂಪರೆಗೆ ಸೇರಿದವರು ಎಂಬ ಕಾರಣದಿಂದ ಅವರುಗಳ ಮೇಲೆ ಗೌರವವನ್ನಿಟ್ಟುಕೊಂಡಿದ್ದರು. ತಮ್ಮ ಅನುಭವದಿಂದ ಕಂಡುಕೊಂಡ ವಿವೇಕದ ಮೂಲಕ ಈ ಪರಂಪರೆಯನ್ನು ಅವರು ಪುಷ್ಟಿಗೊಳಿಸಿದರು. ತಾತ್ತ್ವಿಕ ವಿವೇಚನೆಯ ಗಂಧಗಾಳಿಯೂ ಇಲ್ಲದ ಶ್ರೀರಾಮಕೃಷ್ಣರು ರಾಮಾನುಜರ ತತ್ತ್ವವನ್ನು ಅಷ್ಟು ಚೆನ್ನಾಗಿ ಹೇಗೆ ಗ್ರಹಿಸಿದರು ಎಂಬುದೇ ಅಚ್ಚರಿಯ ಸಂಗತಿ. ಸ್ವಾಮಿ ವಿವೇಕಾನಂದರು ಅಧ್ಯಾತ್ಮ ಸಾಧನೆಯ ಶಿಖರದ ತುಟ್ಟತುದಿ 'ಅದ್ವೈತ' ಎಂದರೂ, ರಾಮಾನುಜ ತತ್ತ್ವವನ್ನೂ ಗೌರವಿಸುತ್ತಿದ್ದರು. ಜ್ಞಾನಕ್ಕೂ ಭಕ್ತಿಗೂ ವಿರೋಧವೇನೂ ಇಲ್ಲವೆಂದು ಅವರು ತಮ್ಮ ಗುರುವಿನಿಂದ ಕಲಿತಿದ್ದರು. ಸ್ವಾಮಿ ಶಾರದಾನಂದರು ತಮ್ಮ 'ಶ್ರೀರಾಮಕೃಷ್ಣ ಲೀಲಾಪ್ರಸಂಗ'ದಲ್ಲಿ ಈ ವಿಷಯವನ್ನು ಒತ್ತಿ ಹೇಳುತ್ತಾರೆ. "ಶುದ್ಧಭಕ್ತಿ ಶುದ್ಧಜ್ಞಾನ ಎರಡೂ ಬೇರೆಬೇರೆಯಲ್ಲ, ಒಂದೇ" ಎಂದು ಯಾವಾಗಲೂ ಹೇಳುತ್ತಿದ್ದ ಶ್ರೀರಾಮಕೃಷ್ಣರು, ಅದ್ವೈತವೇ ಕೊಟ್ಟಕೊನೆಯ ಸತ್ಯ ಎಂಬ ಅಭಿಪ್ರಾಯವುಳ್ಳವರಾಗಿದ್ದರೂ, ಜನಸಾಮಾನ್ಯರಿಗೆ ಬೋಧಿಸುವಾಗ, ವಿಶಿಷ್ಟಾದ್ವೈತ ಅಥವಾ ದ್ವೈತದ ನಿಲುವನ್ನೇ ಬಳಸುತ್ತಿದ್ದರು. ಆ ಸಮಯದಲ್ಲಿ ಅವರು ಹೀಗೆ ಹೇಳುತ್ತಿದ್ದರು: "ಅವನೇ ಈ ಎಲ್ಲವೂ ಆಗಿರುವುದಾದರೂ, ವಿಶ್ವ ಹಾಗೂ ಅದರಲ್ಲಿರುವ ಜೀವಿಗಳಿಂದ ಬ್ರಹ್ಮನು

ವಿಶಿಷ್ಟನಾಗಿದ್ದಾನೆ. ರಾಮಾನುಜ ತತ್ತ್ವದ ಪ್ರಕಾರ ವಿಶ್ವ ಹಾಗೂ ಅದರಲ್ಲಿನ ಜೀವಿಗಳು ಮಿಥ್ಯೆಯಲ್ಲ, ಬ್ರಹ್ಮನದೇ ಭಾಗಗಳು. ಭಾಗಕ್ಕೂ ಇಡಿಯದಕ್ಕೂ ಸಂಬಂಧವಿದ್ದೇ ಇದೆ."

ತಮ್ಮ ಪರಿವ್ರಾಜಕ ಜೀವನವನ್ನು ಪ್ರಾರಂಭಿಸುವುದಕ್ಕಿಂತ ಮುಂಚೆಯೇ ವಿವೇಕಾನಂದರು ಶ್ರೀಭಾಷ್ಯವನ್ನು ಓದಿರಬಹುದಾದ ಸಾಧ್ಯತೆ ಕಡಿಮೆ. ೧೮೮೫ಕ್ಕಿಂತ ಮುಂಚೆ ರಾಮಾನುಜರ ಶ್ರೀಭಾಷ್ಯ, ಗೀತಾಭಾಷ್ಯಗಳ ಮುದ್ರಿತ ದೇವನಾಗರಿ ಪ್ರತಿಗಳೂ ಲಭ್ಯವಿರಲಿಲ್ಲ. ಇಂಗ್ಲಿಷ್ ಅವತರಣಿಕೆಗಳು ೧೮೯೯ರ ಹೊತ್ತಿಗೆ ಮದರಾಸಿನಲ್ಲಿ ಪ್ರಕಟವಾದವು. ಹದಿನಾಲ್ಕನೆಯ ಶತಮಾನದ ಕೃತಿಯಾದ ಮಾಧವಾಚಾರ್ಯರ 'ಸರ್ವದರ್ಶನಸಂಗ್ರಹ'ವನ್ನು ವಿವೇಕಾನಂದರು ಅಮೆರಿಕಾಕ್ಕೆ ಹೋಗುವ ಮೊದಲು ಓದಿದ್ದಿರಬಹುದು. ಇದರಲ್ಲಿ ರಾಮಾನುಜ ತತ್ತ್ವದ ಬಗ್ಗೆ ಒಂದು ಅಧ್ಯಾಯವಿದೆ. ಅಮೆರಿಕಾದಲ್ಲಿ ವೇದಾಂತ ಪ್ರಚಾರ ಮಾಡುತ್ತಿರುವಾಗಲೇ ವಿವೇಕಾನಂದರು ಬ್ರಹ್ಮಸೂತ್ರಗಳ ಮೇಲಣ ಶಂಕರರ ಶಾರೀರಿಕ ಮೀಮಾಂಸಾ ಭಾಷ್ಯ, ರಾಮಾನುಜರ ಶ್ರೀಭಾಷ್ಯ ಹಾಗೂ ಮಧ್ವಾಚಾರ್ಯರ ಸೂತ್ರಭಾಷ್ಯ ಈ ಮೂರನ್ನೂ ಓದಲು ನಿರ್ಧರಿಸಿ ೧೮೯೫ರ ಏಪ್ರಿಲ್ ೪ರಂದು ಅಳಸಿಂಗ ಪೆರುಮಾಳರಿಗೆ ಅವುಗಳನ್ನು ಕಳುಹಿಸುವಂತೆ ಕಾಗದ ಬರೆದರು. ಅಷ್ಟರಲ್ಲಿ ಅಳಸಿಂಗರು ಶ್ರೀಭಾಷ್ಯದ ಮೊದಲ ಸಂಪುಟವನ್ನು ಕಳಿಸಿಯಾಗಿತ್ತು. ೧೮೯೫ರ ಮೇ ೬ರಂದು ಬರೆದ ಕಾಗದದಲ್ಲಿ, "ದ್ವೈತ, ವಿಶಿಷ್ಟಾದ್ವೈತ, ಅದ್ವೈತಗಳಲ್ಲಿ ಸಮಸ್ತ ಧರ್ಮವೂ ಅಡಗಿದೆ; ಒಂದಾದ ಮೇಲೊಂದು ಸಹಜವಾಗಿ ಬರುತ್ತವೆ. ಇವು ಮನುಷ್ಯನ ಆಧ್ಯಾತ್ಮಿಕ ಬೆಳವಣಿಗೆಯ ಹಂತಗಳು. ಎಲ್ಲವೂ ಅವಶ್ಯಕ" ಎಂದು ಬರೆದಿದ್ದಾರೆ. ೧೮೯೫ರ ಜುಲೈ ೭ ರಂದು ವಿವೇಕಾನಂದರು, ಸಹಸ್ರದ್ವೀಪೋದ್ಯಾನದಲ್ಲಿ ರಾಮಾನುಜರ ಶ್ರೀಭಾಷ್ಯವನ್ನು ಪಾಠ ಹೇಳಿದರೆಂದು ಹೇಳುತ್ತ, ಸೋದರಿ ಗಾರ್ಗಿ ಹೀಗೆ ಬರೆದಿದ್ದಾರೆ: "ಸ್ವಾಮೀಜಿಯವರು ಈ ಮೂರು ವೇದಾಂತತತ್ತ್ವಗಳನ್ನು ಸಮನ್ವಯಗೊಳಿಸಿರುವುದು, ಅವರೇ ಹೇಳಿದಂತೆ, ಭಾರತೀಯ ಚಿಂತನೆಗೊಂದು ಮಹತ್ತರವಾದ ಕೊಡುಗೆ." ಸಹಸ್ರದ್ವೀಪೋದ್ಯಾನದಲ್ಲಿ ನಡೆದ ಈ ತರಗತಿಗಳ ಬಗ್ಗೆ ಬರೆಯುತ್ತ ಸಾರಾ ಎಲೆನ್ ವಾಲ್ಡೋ ಹೀಗೆ ಹೇಳುತ್ತಾಳೆ: "ರಾಮಾನುಜಾಚಾರ್ಯರು ಕೊನೆಯವರೆಗೂ ವಿದ್ಯಾರ್ಥಿಗಳ ಮೆಚ್ಚಿನವರಾಗಿಯೇ ಉಳಿದರು."

ರಾಮಾನುಜರು ದಕ್ಷಿಣದಲ್ಲಿ ಪ್ರಾರಂಭಿಸಿದ ಧಾರ್ಮಿಕ ಆಂದೋಲನವೇ ಉತ್ತರದಲ್ಲಿ ಚೈತನ್ಯದೇವನ ಉಗಮಕ್ಕೂ ಕಾರಣವಾಯಿತು ಎನ್ನುತ್ತಾರೆ ವಿವೇಕಾನಂದರು. ಈ ಬಗ್ಗೆ ಅವರು ಹೀಗೆ ಹೇಳುತ್ತಾರೆ: "ಶಂಕರರು ಮಹಾ ಬೌದ್ಧಿಕರಾಗಿದ್ದರೂ, ಅದಕ್ಕೆ ಸಮಾನವಾದ ಹೃದಯ ಅವರಲ್ಲಿರಲಿಲ್ಲ. ರಾಮಾನುಜರ ಹೃದಯ ಅದಕ್ಕಿಂತ ದೊಡ್ಡದು. ಜನರಿಗೆ ಅತ್ಯಂತ ಅಗತ್ಯವಾಗಿದ್ದ ಪೂಜಾವಿಧಾನಗಳನ್ನು, ಕರ್ಮಕಲಾಪಗಳನ್ನು ಅವರು ಸಾಧ್ಯವಿದ್ದಮಟ್ಟಿಗೂ ಶುದ್ಧೀಕರಿಸಿಕೊಟ್ಟರು. ಜೊತೆಗೇ ಅವರು ಬ್ರಾಹ್ಮಣ, ಅಸ್ಪೃಶ್ಯ ಎಂಬ ಭೇದವಿಲ್ಲದೆ ಎಲ್ಲರಿಗೂ ಅಧ್ಯಾತ್ಮಸಂಪತ್ತಿನ ಬಾಗಿಲನ್ನು ತೆರೆದರು. ಇದೇ ರಾಮಾನುಜರು ಮಾಡಿದ ಕೆಲಸ. ಇದೇ ಹರಡುತ್ತ, ಮಹಮ್ಮದೀಯರ ಆಳ್ವಿಕೆಯ ಕಾಲದಲ್ಲಿ ಉತ್ತರಭಾರತದಲ್ಲಿ ಮುನ್ನಡೆಯಿತು; ಈ ಪರಂಪರೆಯ ಪ್ರವಾದಿಗಳಲ್ಲಿ ಇತ್ತೀಚಿನವನೇ ಚೈತನ್ಯದೇವ ಎಂದು ಹೇಳಬಹುದು."

ವಿವೇಕಾನಂದರು ರಾಮಾನುಜರನ್ನು ದ್ವೈತಿಯೆಂದೇ ಪರಿಗಣಿಸುತ್ತಾರೆ. ಅವರಿಗಿಂತ ಮುಂದಿನ ದ್ವೈತಪಂಥದವರೆಲ್ಲ ಬೋಧನೆಯ ವಿಧಾನದಲ್ಲಿ ಅವರನ್ನೇ ಅನುಸರಿಸಿದ್ದಾರೆ. ಶೈವರೂ ಸಹ 'ವಿಷ್ಣು'ವಿನ ಜಾಗದಲ್ಲಿ 'ಶಿವ'ನನ್ನು ಸ್ಥಾಪಿಸಿಕೊಂಡಿರುವ, ಜೀವಾತ್ಮನನ್ನು 'ಅಣು' ಎನ್ನುವುದಕ್ಕೆ ಬದಲಾಗಿ, 'ವಿಭು' ಎಂದುಕೊಳ್ಳುವ ರಾಮಾನುಜರ ಅನುಯಾಯಿಗಳೇ ಎಂಬಷ್ಟು ಸಾಮ್ಯವಿದೆ ಎನ್ನುತ್ತಾರೆ, ಸ್ವಾಮೀಜಿ. ರಾಮಾನುಜರ ಇಷ್ಟದೇವತೆಯ ಕಲ್ಪನೆಯನ್ನೂ ಸಹ ಅವರು ಒಪ್ಪುತ್ತಾರೆ; ಏಕೆಂದರೆ ರಾಮಾನುಜರೆನ್ನುವಂತೆ ನಾವು ದೇವರ, ಪ್ರಕೃತಿಯ, ಜೀವಾತ್ಮನ ಎಲ್ಲ ಕಲ್ಪನೆಗಳನ್ನೂ ಪರಿಗಣಿಸಬೇಕು; ಬಾಹ್ಯಪ್ರಪಂಚ ನಮ್ಮ ಪಾಲಿಗೆ ನಿಜವಾಗಿರುವವರೆಗೂ ಜೀವಾತ್ಮನ ಇಷ್ಟದೇವತೆ ತ್ಯಾಜ್ಯವಲ್ಲ; ನಮ್ಮ ಶರೀರ ಇರುವವರೆಗೂ ನಾವು ದ್ವೈತಿಗಳೇ ಎನ್ನುತ್ತಾರೆ, ಅವರು.

ಶಂಕರರ ಅದ್ವೈತ ಸಾಧಾರಣ ಮಾನವರ ಬೌದ್ಧಿಕ ಮಟ್ಟವನ್ನು ಮೀರಿದ್ದು ಎಂಬುದು ವಿವೇಕಾನಂದರ ಅನಿಸಿಕೆ. ಅವರು ಹೀಗೆ ಹೇಳುತ್ತಾರೆ: "ರಾಮಾನುಜರು ಭಗವಂತನಿಗೆ ಪ್ರಜ್ಞೆಯನ್ನು ಆರೋಪಿಸುತ್ತಾರೆ; ಅದ್ವೈತಿಗಳು ದೇವರಿಗೆ ಯಾವ ಗುಣವನ್ನೂ ಅಂಟಿಸಲು ಬಿಡುವುದಿಲ್ಲ. ಬೌದ್ಧಿಕತೆಯ ಬಲದಿಂದ ಮುನ್ನುಗ್ಗಿದರೂ, ಜಾತಿನಿಯಮಗಳಿಂದಾಗಿ, ಭಾವಸ್ಪಂದನಕ್ಕೆ ಅವಕಾಶವಿಲ್ಲದ್ದಕ್ಕಾಗಿ, ಸಂವಹನೆಗೆ ಕೇವಲ ಸಂಸ್ಕೃತವನ್ನು ಮಾತ್ರ ಬಳಸಿದ್ದಕ್ಕಾಗಿ, ಶಂಕರರ ಆಂದೋಳನವು ಜನಸಾಮಾನ್ಯರನ್ನು ಮುಟ್ಟಲಿಲ್ಲ. ರಾಮಾನುಜರು ಪ್ರಾಯೋಗಿಕವಾದ ತಮ್ಮ ತತ್ತ್ವದಲ್ಲಿ ಭಕ್ತಿಭಾವಕ್ಕೆ ಪ್ರೋತ್ಸಾಹಕೊಟ್ಟು, ಅಧ್ಯಾತ್ಮಸಾಧನೆಗೆ ಜಾತಿಯನ್ನು ಅಡ್ಡಿಯಾಗಿಸದೆ, ಜನಸಾಮಾನ್ಯರ ಮನವನ್ನು ಗೆದ್ದುಕೊಂಡು, ಅವರನ್ನು ವೈದಿಕಧರ್ಮಕ್ಕೆ ಹಿಂದಿರುಗುವಂತೆ ಮಾಡುವುದರಲ್ಲಿ ಸಂಪೂರ್ಣ ಯಶಸ್ವಿಯಾದರು." ರಾಮಾನುಜರು ಕೂಡ ಉಪನಿಷತ್ತುಗಳೆಲ್ಲವನ್ನು ತಮ್ಮದೇ ದೃಷ್ಟಿಕೋನದಿಂದ ನೋಡುವ ತಪ್ಪು ಮಾಡಿದರು; ಆದರೂ ಶಂಕರ–ರಾಮಾನುಜರಿಬ್ಬರೂ ಧರ್ಮಾರ್ಥಕಾಮಮೋಕ್ಷಗಳಲ್ಲಿ ಸಮನ್ವಯವನ್ನು ಸಾಧಿಸುವ ಮೂಲಕ ವೈದಿಕಧರ್ಮದ ಪುನರುತ್ಥಾನಕ್ಕೆ ಕಾರಣರಾದರು; ಅದ್ವೈತ ವಿಶಿಷ್ಟಾದ್ವೈತಗಳೆರಡೂ ಸಮಾನ ಪ್ರಾಮುಖ್ಯತೆಯುಳ್ಳವು – ಇವು ವಿವೇಕಾನಂದರ ಕೆಲವು ಅನಿಸಿಕೆಗಳು.

ವಿವೇಕಾನಂದರು ದ್ವೈತ, ವಿಶಿಷ್ಟಾದ್ವೈತ ಮತ್ತು ಅದ್ವೈತಗಳು ಅಧ್ಯಾತ್ಮಸಾಧನೆಯ ಮುಕ್ತಿಮಾರ್ಗದಲ್ಲಿನ ಮೂರು ಹಂತಗಳು ಎಂದು ಸ್ಪಷ್ಟವಾಗಿ ಹೇಳಿರುವಾಗ, ಅವರು ಶಂಕರ–ರಾಮಾನುಜರಲ್ಲಿ ಯಾರನ್ನು ಹೆಚ್ಚು ಮೆಚ್ಚಿದರು ಎಂಬ ಪ್ರಶ್ನೆ ಅಪ್ರಸ್ತುತವಾಗುತ್ತದೆ. ರಾಮಕೃಷ್ಣ ವಿವೇಕಾನಂದರು ಸೈದ್ಧಾಂತಿಕ ಚರ್ಚೆಗಳನ್ನು ಮೆಚ್ಚುತ್ತಿರಲಿಲ್ಲ – ಅವು ನಮ್ಮನ್ನು ಸಾಕ್ಷಾತ್ಕಾರದ ಹಾದಿಯಿಂದ ತಪ್ಪಿಸಿಬಿಡುತ್ತವೆ ಎಂದು ಅವರ ಅಭಿಪ್ರಾಯ. ವೇದಾಂತವೇ ಮೂರ್ತೀಭವಿಸಿದ್ದಂಥ ಗುರು ಶ್ರೀರಾಮಕೃಷ್ಣರ